අ.ದಾವಾ ನಂಬರ್ 70/2021 ಪಿ.ಡಬ್ಲ್ಯೂ - 1

ದಿನಾಂಕಃ 05/07/2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ಶ್ರೀ ಎಸ್.ಕೆ.ಎಸ್. ವಕೀಲರಿಂದಃ

ನಮ್ಮ ತಂದೆಗೆ ಫಜ್ಜಲ್ ರೆಹಮಾನ್, ನಿಸ್ಸಾರ್ ಅಹಮ್ಮದ್, ಎಂ.ಅಬ್ದುಲಾ 3 ಗಂಡು ಮಕ್ಕಳು ಎಂದರೆ ಸರಿ. 7 ಜನ ಹೆಣ್ಣು ಮಕ್ಕಳು. ನಮ್ಮ ತಂದೆ ಸುಮಾರು 25 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ. ನಮ್ಮ ತಂದೆ ಯಾವ ದಿನಾಂಕದಂದು ಮೃತಪಟ್ಟಿರುತ್ತಾರೆ ನನಗೆ ಗೊತ್ತಿಲ್ಲ. ನನ್ನ ತಂದೆ ಬದುಕಿದ್ದಾಗ ನಾವು ಮೂರು ಜನ ಅಣ್ಣ-ತಮ್ಮಂದಿರು ಒಟ್ಟಿಗೆ ಇದ್ದೇವು, ಅವರು ಮೃತಪಟ್ಟ ನಂತರ ನಾವುಗಳು ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದೇವೆ. ನಮ್ಮ ಹಿರಿಯ ಅಣ್ಣ 20 ವರ್ಷದಿಂದ ಬೇರೆಯಾಗಿದ್ದಾನೆ. ನಾನು ಹಳ್ಳಿಮೈಸೂರಿನಲ್ಲಿ ವಾಸವಾಗಿಲ್ಲ ಆದರೆ ಬೆಂಗಳೂರಿನಲ್ಲಿ ವಾಸವಾಗಿರುತ್ತೇನೆ. ನಾನು ಹಳ್ಳಿಮೈಸೂರಿಗೆ ವರ್ಷಕೊಮ್ಮೆ ಅಥವಾ ಎರಡು ವರ್ಷಕೊಮ್ಮೆ ಬಂದು ಹೋಗುತ್ತಿದ್ದೇನೆ.

ದಾವಾ ಸ್ವತ್ತು ಮತ್ತು 2 ನೇ ಪ್ರತಿವಾದಿಗೆ ಮಾರಾಟ ಮಾಡಿರುವ ಜಮೀನಿನ ಚೆಕ್ಕುಬಂಧಿ ಬೇರೆ ಬೇರೆಯಾಗಿರುತ್ತದೆ ಎಂದರೆ ಸರಿಯಲ್ಲ. ನನ್ನ ತಂದೆಗೆ ದಾವಾ ಆಸ್ತಿಯನ್ನು ಬಿಟ್ಟು ಬೇರೆ ಜಮೀನು ಇರುವುದಿಲ್ಲ ಆದರೆ ಮನೆಗಳು ಇರುತ್ತವೆ. ಸದರಿ ಮನೆಗಳನ್ನು ಬೇರೆಯವರಿಗೆ ಮಾರಾಟ ಮಾಡಿದ್ದೇವೆ. ಮನೆಗಳನ್ನು ಸುಮಾರು 15 ವರ್ಷದಿಂದ ಬೇರೆಯವರಿಗೆ ಮಾರಾಟ ಮಾಡಿರುತ್ತೇವೆ ಅವರ ಹೆಸರು ಈಗ ನನಗೆ ನೆನಪಿಲ್ಲ. ನನ್ನ ಅಣ್ಣನ ಹೆಂಡತಿಯ ಹೆಸರು ಮಾಮ್ತಾಜ್ ಎಂದರೆ ಸರಿ. ನಾನು ಮತ್ತು ಫಜ್ಜುಲ್ ರೆಹಮಾನ್ ರವರ ಮಕ್ಕಳು ವಿಶ್ವಾಸದಿಂದ ಇದ್ದೇವೆ ಎಂದರೆ ಸರಿಯಲ್ಲ. ನಾನು ಊರಿಗೆ ಬಂದಗಾ ಅವರನ್ನು ಮಾತನಾಡಿಸುವುದಿಲ್ಲ. ನಮ್ಮ ತಂದೆ ಮರಣ ಹೊಂದಿದ ನಂತರ ಮೂರು ಜನ ಮಕ್ಕಳ ನಡುವೆ ದಿನಾಂಕಃ 21.10.1993 ರಂದು ವಿಭಾಗಪತ್ರ ಆಗಿರುತ್ತದೆ ಎಂದರೆ ಸರಿಯಲ್ಲ ಸದರಿ ವಿಭಾಗ ಪತ್ರದಂತೆ ನಮಗಳಿಗೆ ಪಂಚಾಯ್ತಿ ಖಾತೆ ಸಂ 413, 442, ಜಂಜರ್ ನಂಬರ್ 86 ರಂತೆ ಆಗಿರುತ್ತದೆ ಎಂದರೆ ಸರಿಯಲ್ಲ. ದಿನಾಂಕಃ 09.11.1995 ರಂದು ನಾನು ಮತ್ತು ಫಜ್ಜಲ್, ನಿಸ್ಸಾರ್ ಅಹಮ್ಮದ್ ರವರಗಳು ಸೇರಿ ಎಸ್.ಎಂ. ಹರೀಶ್ ರವರಿಗೆ ಕ್ರಯಪತ್ರ ಮಾಡಿಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ದಿನಾಂಕಃ 27.02.1998 ರಲ್ಲಿ ರಾಜಣ್ಣಶೆಟ್ಟಿಯವರಿಗೆ ನಮ್ಮ ಇನ್ನೊಂದು ಆಸ್ತಿಯನ್ನು ನಾವು ಮೂರು ಜನ ಅಣ್ಣ-ತಮ್ಮಂದಿರು ಸೇರಿಕೊಂಡು ಕ್ರಯ ಮಾಡಿಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ ದಿನಾಂಕಃ 13.01.1995 ರಂದು ನಿಸ್ಸಾರ್ ಅಹಮ್ಮದ್ ರವರು ತಮಗೆ ಬಂದಿರುವ ಆಸ್ತಿಯನ್ನು ಹೆಚ್.ಕೆ. ಹರೀಶ್ ರವರಿಗೆ ಮಾರಾಟ ಮಾಡಲಾಗಿದೆ ಎಂದರೆ ಸರಿಯಲ್ಲ. ನಮ್ಮ ಅಣ್ಣ-ತಮ್ಮಂದಿರ ನಡುವೆ ವಿಭಾಗ ಆಗಿದ್ದರೂ ಸಹ ಸದರಿ ವಿಚಾರವನ್ನು ಮರೆಮಾಚಿ ಸುಳ್ಳು ದಾವೆಯನ್ನು ಹೂಡಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇವೆ ಎಂದರೆ ಸರಿಯಲ್ಲ.

ನಾವುಗಳು ಗ್ರಾಮದಲ್ಲಿ ಪಂಚಾಯ್ತಿಯನ್ನು ಸೇರಿಸಿರುವುದಿಲ್ಲ, ಹಾಗಾದರೆ ನಮ್ಮ ವಾದ ಪತ್ರದಲ್ಲಿ ಬರೆಸಿರುವ ಅಂಶಗಳು ಸುಳ್ಳು ಎಂದರೆ ಸರಿಯಲ್ಲ. ನಮ್ಮ ಅಣ್ಣ-ತಮ್ಮಂದಿರು ಒಟ್ಟಿಗೆ ಇದ್ದಾಗಾ ಬೇರೆ ಆಸ್ತಿಗಳನ್ನು ಖರೀದಿ ಮಾಡಿರುವುದಿಲ್ಲ. ಎಲ್ಲಾ ಆಸ್ತಿಗಳು ನಮ್ಮ ತಂದೆಯಿಂದ ಬಂದಂತಹ ಆಸ್ತಿಗಳು. ನಾವು ಮನೆಗೆ ಸಂಬಂಧಿಸಿದಂತೆ ದಾವೆಯನ್ನು ಹೂಡಿರುವುದಿಲ್ಲ, ಜಮೀನಿಗೆ ಸಂಬಂಧಿಸಿದಂತೆ ಮಾತ್ರ ಸದರಿ ದಾವೆಯನ್ನು ಹೂಡಿರುತ್ತೇವೆ ಜಮೀನಿನ ಮೌಲ್ಯವು ಕ್ರಯಪತ್ರದ ಮಾಡಿದ ದಿನಕ್ಕೂ ಮತ್ತು ಪ್ರಸ್ತುತ ಜಮೀನಿನ ಮೌಲ್ಯವು ತುಂಬಾ ವ್ಯತ್ಯಾಸದಿಂದ ಕೂಡಿರುತ್ತದೆ ಎಂದರೆ ಸರಿ. ನಾವು ಹೆಚ್ಚಿನ ದುರ್ಲಾಭ ಪಡೆಯುವ ಉದ್ದೇಶದಿಂದ ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸ.ಇ.

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಹೊಳೆನರಸೀಪುರ